ಕಾರ್ಯಕ್ರಮ ಸನ್‌ರೈಸ್ ಕ್ಯಾಂಡಲ್ಸ್ ಮತ್ತಷ್ಟು ಪ್ರಸಿದ್ಧವಾಗಲು ಸಹಾಯಕವಾಯಿತು.

ಮೋರೇಶ್ವರ ಭಾವೇಶ್ ಅವರ ತಂಡಕ್ಕೆ ಅನೇಕ ಹೊಸ ಆಯಾಮಗಳನ್ನು ತಂದುಕೊಟ್ಟಿತು, ಹೊಸ ಅವಕಾಶಗಳಿಗೆ ಬಾಗಿಲು ತೆರೆಯಿತು. ಅವರು ಸಿಂದೋಡಾದಲ್ಲಿ ಬಾಡಿಗೆಯ ಜಾಗದಲ್ಲಿ ಇರುವಾಗ, ದೊಡ್ಡ ಆರ್ಡರ್ ಪೂರ್ಣಗೊಳಿಸಲು 24 ಗಂಟೆಯೂ ಮೂರು ಶಿಫ್ಟ್‌ನಲ್ಲಿ ಕೆಲಸ ಮಾಡಬೇಕಾಗುತ್ತಿತ್ತು. ಮನೆ ಮಾಲೀಕನ ಕೋಪಕ್ಕೆ ಗುರಿಯಾಗಬೇಕಿತ್ತು. ಇಲ್ಲಿ ಅವರು ತಮ್ಮ ಸ್ವಂತ ನೆಲದಲ್ಲಿ ನಿಂತಿದ್ದರು. ಯಾರನ್ನೂ ಕೇಳಬೇಕಿರಲಿಲ್ಲ. ಸ್ವತಂತ್ರ ಹಕ್ಕಿಗಳಂತೆ ಮುಗಿಲು ಮುಟ್ಟುವ ತವಕದಲ್ಲಿ ರೆಕ್ಕೆ ಬಿಚ್ಚಿದ್ದರು. ತಮ್ಮ ಸೃಜನಶೀಲತೆಗೆ ಮೇಣದಲ್ಲಿ ಸಹಸ್ರ ರೂಪಗಳನ್ನು ನೀಡ ಹೊರಟಿದ್ದರು. ಆ ಬಾರಿ ದೀಪಾವಳಿಗೆ ರಿಲಯನ್ಸ್ ಕಂಪನಿಯಿಂದ ಆರ್ಡರ್ ಬಂದಾಗ, ಮನಸ್ಸಿಗೆ ಬಹಳ ಸಮಾಧಾನವಿತ್ತು. ಈಗ ಕೆಲಸ ಮಾಡಲು ಸಾಕಷ್ಟು ಜಾಗವಿತ್ತು. ತಯಾರಾದ ವಸ್ತುಗಳನ್ನು ಇಡಲು ತಾಣವಿತ್ತು. ಕಚ್ಚಾ ಸಾಮಗ್ರಿಗಳನ್ನು ಸಂಗ್ರಹಿಸಿಡಲು ಸ್ಥಳವಿತ್ತು. ವಿವಿಧ ವಿಭಾಗಗಳು, ಮ್ಯಾನುಫ್ಯಾಕ್ಚರಿಂಗ್, ಪ್ಯಾಕೇಜಿಂಗ್, ಲಾಜಿಸ್ಟಿಕ್, ಅಕೌಂಟ್ ಮುಂತಾದುವು ಬೇರೆ ಬೇರೆ ಕೋಣೆಗಳಲ್ಲಿ ತಮ್ಮ ಕೆಲಸದಲ್ಲಿ ನಿರಾತಂಕವಾಗಿ ತೊಡಗಿದ್ದವು. ಈಗ ಸರಿಯಾದ ಅರ್ಥದಲ್ಲಿ ಅವರ ಕಾರ್ಖಾನೆ ರೂಪುಗೊಂಡಿತ್ತು.

ಭಾವಸಾ ಮತ್ತು ಕೃಷ್ಣಕಾಂತ್ ಭಾಯಿ ತಮ್ಮ ಪರಿವಾರದ ಜೊತೆಗೆ ಮೋರೇಶ್ವರಕ್ಕೆ ಬಂದಾಗ ಈ ಎಲ್ಲ ವ್ಯವಸ್ಥೆಯನ್ನು ನೋಡಿ ಒಂದು ಒಳ್ಳೆಯ ಕೆಲಸಕ್ಕೆ ಸಹಾಯಕರಾದ ಸಂತಸ ಅವರಿಗಾಗಿತ್ತು. ಪ್ರವಾಸಿಗರು ವ್ಯಾಕ್ಸ್ ಮ್ಯೂಸಿಯಂಗೆ ಬರಲು ಆರಂಭಿಸಿದ ಮೇಲೆ, ಕೆಲಸಕ್ಕೆ ಹೊಸ ತಿರುವು ಸಿಕ್ಕಿತು. ಸಾಕಷ್ಟು ಕೆಲಸ ಸಿಗತೊಡಗಿತು. ಹಾಗಾಗಿ ಸುಮಾರು 60 ಜನ ಅಂಧರಿಗೆ ಜೀವನೋಪಾಯ ಕಲ್ಪಿತವಾಗಿತ್ತು. ಜೊತೆಗೆ ಉಚಿತ ವಾಸದ ವ್ಯವಸ್ಥೆ ಮತ್ತು ಊಟ ಉಪಚಾರ ದೊರೆಯುತ್ತಿತ್ತು.

ತಮ್ಮದಾದ ತಾವು ದೊರೆತು ಮೋರೇಶ್ವರದಲ್ಲಿ ಮೇಣದ ಮ್ಯೂಸಿಯಂ ಎಂದು ಕರೆದು ಮೋಂಬತ್ತಿಗಳ ಪ್ರದರ್ಶನ ಮತ್ತು ಮಾರಾಟ ಏರ್ಪಡಿಸಿದಂತೆ, ಪ್ರವಾಸಿಗರು ಮಾತ್ರವಲ್ಲ ಸುಪ್ರಸಿದ್ಧರೂ ಕುತೂಹಲದಿಂದ ಇಲ್ಲಿಗೆ ಆಗಮಿಸತೊಡಗಿದರು.

ಒಂದು ದಿನ ಮಹಾಬಲೇಶ್ವರದ ನಗರಪಾಲಿಕೆಯ ಮುಖ್ಯ ಅಧಿಕಾರಿ ಪವಾರ್ ಅವರು ಫೋನ್ ಮಾಡಿ ಹೇಳಿದರು, 'ಭಾವೇಶ್ ಭಾಯಿ, ಸ್ವಲ್ಪ ಹೊತ್ತಿನಲ್ಲಿ ನಾವು ನಿಮ್ಮ ಮೋರೇಶ್ವರದ ಪ್ರಾಜೆಕ್ಟ್ ನೋಡಲು ಬರುತ್ತಿದ್ದೇವೆ'. ಆ ಸಮಯದಲ್ಲಿ ಭಾವೇಶ್ ತಮ್ಮ ತಂಡದೊಡನೆ ದಿನದ ಕೆಲಸದಲ್ಲಿ ವ್ಯಸ್ತರಾಗಿದ್ದರು. ಸ್ವಲ್ಪವೇ ಹೊತ್ತಿಗೆ ಹತ್ತು ಹನ್ನೆರಡು ಗಾಡಿಗಳು ಮೋರೇಶ್ವರ ಯೂನಿಟ್‌ಗೆ ಬಂದು ತಲುಪಿದವು. ನೀತಾ ಅಚ್ಚರಿಯಿಂದ, 'ಪವಾರ್ ಅವರೊಡನೆ ಓರ್ವ ದಂಪತಿಗಳು ಬರುತ್ತಿದ್ದಾರೆ, ಜೊತೆಗೆ ನಗರಪಾಲಿಕೆಯ ಅನೇಕ ಪರಿಚಿತ ಅಧಿಕಾರಿಗಳು, ಮಾನ್ಯರೂ ಇದ್ದಾರೆ.

## ಇಲ್ಲಿಯವರೆಗೆ



ಸನ್‌ರೈಸ್ ಬಳಗದ ಪ್ರಭಾವಳಿ ದಿನದಿಂದ ದಿನಕ್ಕೆ ಪ್ರಖರವಾಗತೊಡಗಿತು. ಹಿತೈಷಿಗಳ ನೆರವಿನಿಂದ ಭಾವೇಶ್ ಅವರ ಬಳಗ ಬಾಡಿಗೆ ಕಟ್ಟಡದಿಂದ ಸ್ವಂತ ಕಟ್ಟಡಕ್ಕೆ ಸ್ಥಳಾಂತರಗೊಳ್ಳುವುದು ಸಾಧ್ಯವಾಯಿತು. ಅಂಧಮಿತ್ರರಿಗೆ ಕೈ ತುಂಬಾ ಕೆಲಸವೂ ದೊರೆಯುತ್ತಿತ್ತು. ಆದರೆ, ಭಾವೇಶ್‌ರ ಯಶಸ್ಸಿನ ನಾಗಾಲೋಟ ಅಷ್ಟಕ್ಕೆ ನಿಲ್ಲುವಂತಿರಲಿಲ್ಲ. ತಮ್ಮ ಕೆಲಸದ ಪರಿಧಿಯನ್ನು ವಿಸ್ತರಿಸಿಕೊಳ್ಳುವುದು, ಆ ಮೂಲಕ ಮತ್ತಷ್ಟು ಅಂಧಮಿತ್ರರ ದುಡಿಯುವ ಕೈಗಳಿಗೆ ಕೆಲಸ ನೀಡುವುದು ಅವರ ಉದ್ದೇಶವಾಗಿತ್ತು.

ಆದರೆ ಅವರೊಡನೆ ಇಷ್ಟೊಂದು ಜನ ಪೋಲಿಸರು ಏಕೆ ಇದ್ದಾರೆ ಅರ್ಥವಾಗುತ್ತಿಲ್ಲ' ಎಂದು ಭಾವೇಶ್ ಅವರಿಗೆ ಹೇಳಿದರು. ಅಷ್ಟರಲ್ಲಿ ಪವಾರ್ ಅವರು ಭಾವೇಶ್ ಅವರನ್ನು ಉದ್ದೇಶಿಸಿ, 'ಭಾವೇಶ್ ಭಾಯಿ, ಈ ದಿನ ಓರ್ವ ವಿಶಿಷ್ಟ ವ್ಯಕ್ತಿ ನಿಮ್ಮನ್ನು ಭೇಟಿಯಾಗಲು ಬಂದಿದ್ದಾರೆ. ಇಲ್ಲಿ ನೋಡಿ ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಾದ ಜಸ್ಟಿಸ್ ಡಿ.ವೈ. ಚಂದ್ರಚೂಡ್ ಅವರು ತಮ್ಮ ಧರ್ಮಪತ್ನಿಯೊಡನೆ ಬಂದಿದ್ದಾರೆ'. ಭಾವೇಶ್ ಮತ್ತು ನೀತಾ ಅವರಿಗೆ ತುಂಬಾ ಸಂತಸವಾಯಿತು. ಅವರು ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರ ಮಹತ್ವಪೂರ್ಣ ಪದವಿಯಲ್ಲಿ ಇರುವ ಕಾರಣ ಇಷ್ಟೆಲ್ಲ ಸುರಕ್ಷತಾ ವ್ಯವಸ್ಥೆ ಇರುವುದು ಸಹಜ ಎಂದು ಆಗ ಭಾವೇಶ್ ಅವರಿಗೆ ಅರ್ಥವಾಯಿತು. ದೂರದರ್ಶನದಲ್ಲಿ ಅವರ ಹೆಸರನ್ನು ಕೇಳಿದ್ದರು. ಇಂದು ಅವರನ್ನು ಭೇಟಿಯಾಗುವ ಅವಕಾಶ ದೊರೆತಿತ್ತು. ಇವರ ಮೋಂಬತ್ತಿಗಳನ್ನು, ಕಾರ್ಯಾಗಾರವನ್ನು ನೋಡಿದ ಜಸ್ಟಿಸ್ ಚಂದ್ರಚೂಡಾ ಅವರು ಭಾವೇಶ್ ಅವರ ಬೆನ್ನುತಟ್ಟಿ ಮೆಚ್ಚುಗೆ ವ್ಯಕ್ತಪಡಿಸಿದರು. ಅಂಧಮಿತ್ರರು ಅವರ ಎದುರು ಕೆಲವು ಗೀತೆಗಳನ್ನು ಹಾಡಿದರು. ಇಡೀ ವಾತಾವರಣದಲ್ಲಿ ಹುಮ್ಮಸ್ಸು ವ್ಯಾಪಿಸಿತ್ತು. ಕೆಲವು ಮೋಂಬತ್ತಿಗಳನ್ನು ಭಾವೇಶ್ ಉಡುಗೊರೆಯಾಗಿ ನೀಡಿದರು. ಆದರೆ ಅವರು ಅವೆಲ್ಲದರ ಬೆಲೆಯನ್ನು ನೀಡಿಯೇ ತೆಗೆದುಕೊಂಡದ್ದು. 'ನೀವೂ ನಿಮ್ಮ ಪತ್ನಿಯೊಂದಿಗೆ ದಿಲ್ಲಿಗೆ ಬನ್ನಿ' ಎಂದು ಆಮಂತ್ರಣವನ್ನೂ ಕೊಟ್ಟುಹೋದರು.

### ಅಜೀಮ್ ಪ್ರೇಮ್‌ಜಿ ಭೇಟಿ

ಒಂದು ದಿನ ಮೋಂಬತ್ತಿ ತಯಾರಿಕೆಯಲ್ಲಿ ಭಾವೇಶ್ ಮತ್ತು ಅಂಧಮಿತ್ರರು ತೊಡಗಿದ್ದರು. ಆ ದಿನ ನೀತಾ ಹೊರಗೆಲ್ಲೋ ಹೋಗಿದ್ದರು. ಯಾರೂ ದೃಷ್ಟಿ ಇರುವ ಸ್ವಯಂಸೇವಕರು ಆ ದಿನ ಮೋರೇಶ್ವರದಲ್ಲಿ ಇರಲಿಲ್ಲ. ಆಗಲೇ ಮುಂದಿನ ಅಂಗಳದಲ್ಲಿ ವಾಹನವೊಂದು ಬಂದು ನಿಂತ ಸದ್ದು. ಗ್ರಾಹಕರು ಹೀಗೆ ಬಂದೊಡನೆ ಅವರನ್ನು ಅತ್ಯಂತ ಆದರದಿಂದ ಸ್ವಾಗತಿಸುವ ತರಪೇತು ತಂಡದ ಎಲ್ಲರಿಗೂ ತಿಳಿದಿತ್ತು. ಓರ್ವ ವ್ಯಕ್ತಿ ಬರುತ್ತಿರುವುದು ಅರಿವಾಗಿ ಅವರನ್ನು ಸ್ವಾಗತಿಸಿ, ತಮ್ಮ ಡಿಸ್‌ಪ್ಲೇನಲ್ಲಿದ್ದ ಮೋಂಬತ್ತಿಗಳನ್ನು ತಂಡದ ಅಂಧರೊಬ್ಬರು ವರ್ಣಿಸತೊಡಗಿದರು. ಸ್ವಲ್ಪ ಹೊತ್ತು ಅದನ್ನು ಕೇಳಿ, ಆ ಮಹಾನುಭಾವರು ಭಾವೇಶ್ ಅವರನ್ನು ಬಳಿಗೆ ಕರೆದು, 'ಈ ಕೇಂದ್ರವನ್ನು ನಡೆಸಲು ನೀವು ಎಲ್ಲಿಂದ ಹಣ ತರುತ್ತೀರ?' ಎಂದು ಕೇಳಿದರು. 'ಸರ್, ಮೋಂಬತ್ತಿಗಳನ್ನು ಮಾರಿ ನಮ್ಮ ಜೀವನೋಪಾಯ ನಡೆಯುತ್ತದೆ' ಎಂದು ಭಾವೇಶ್ ವಿನಯದಿಂದ ಹೇಳಿದರು. ಮತ್ತೆ ಅವರು, 'ಮಿಸ್ಟರ್, ಸರ್ಕಾರದ್ದಾಗಲೀ, ಸರ್ಕಾರೇತರದ್ದಾಗಲೀ ಅನುದಾನವಿಲ್ಲದೆ ಇಷ್ಟು ಜನರ ಖರ್ಚು ಭರಿಸುತ್ತಿದ್ದೀರಿ. ನಾನು ಈ ಬಗೆಯ ಕೇಂದ್ರಗಳಿಗೆ ಹೋಗಿ ಪದಾಧಿಕಾರಿಗಳನ್ನು ನಿಮ್ಮ ಬೇಡಿಕೆ ಏನು ಎಂದು ಕೇಳಿದರೆ ಉದ್ದನೆಯ ಪಟ್ಟಿ ನೀಡುತ್ತಾರೆ. ಅವರೆಲ್ಲ ರಶೀದಿ ಪುಸ್ತಕ ಹಿಡಿದೇ ಬರುತ್ತಾರೆ. ನಿಮ್ಮ ಪ್ರಾಜೆಕ್ಟ್ ನನಗೆ ಇಷ್ಟವಾಗಿದೆ. ಡೊನೇಶನ್ ಕೊಡಲು ಬಯಸುತ್ತೇನೆ. ಒಂದು ದೊಡ್ಡ ಮೊತ್ತವನ್ನೇ ಕೊಡಲು ಬಯಸುತ್ತೇನೆ' ಎಂದರು.

ಮತ್ತೆ ಭಾವೇಶ್ ವಿನಮ್ರತೆಯಿಂದ ಅವರಿಗೆ ಧನ್ಯವಾದಗಳನ್ನು ಹೇಳುತ್ತಲೇ 'ನನಗೆ ಯಾವುದೇ ರೀತಿಯ ಆರ್ಥಿಕ ನೆರವು ಬೇಕಿಲ್ಲ' ಎನ್ನುತ್ತಾ ಅವರನ್ನು 'ಸರ್, ನೀವು ಎಲ್ಲಿಂದ ಬಂದಿದ್ದೀರಿ?' ಎಂದು ವಿಚಾರಿಸಿದರು. ಅವರು ಬೆಂಗಳೂರಿನಿಂದ ಬಂದಿರುವುದು ತಿಳಿಯಿತು. 'ಸರ್, ನಿಮ್ಮ ಕಾರ್ಯಕ್ಷೇತ್ರವೇನು?' ಎಂದು ಕೇಳಿದಾಗ ಅವರು 'ಒಂದು ಚಿಕ್ಕ ಐ.ಟಿ. ಕಂಪನಿ ನಡೆಸುತ್ತೇನೆ' ಎಂದರು. ಭಾವೇಶ್ ಕಂಪನಿ ಹೆಸರು ಕೇಳಿದಾಗ ಅದು 'ವಿಪ್ರೊ' ಎಂದು ತಿಳಿಯಿತು! 'ಸರ್, ವಿಪ್ರೊ ಎಂದರೆ ಅಜೀಮ್ ಪ್ರೇಮ್‌ಜಿ ಅವರ ಕಂಪನಿ' ಎಂದು ಉತ್ಸಾಹದಿಂದ ಭಾವೇಶ್ ಹೇಳಿದರು. 'ನಿಮಗೆ ಅವರು ಗೊತ್ತೇ?' ಆತ ಕೇಳಿದರು. 'ಹೌದು ಸರ್, ನಾನು ಅವರ ದೊಡ್ಡ ಅಭಿಮಾನಿ' ಎಂದರು. 'ಅಷ್ಟು ದೊಡ್ಡ ಅಭಿಮಾನಿ ಆಗಿದ್ದರೆ ಇಲ್ಲಿಯವರೆಗೂ ಅವರನ್ನು ಭೆಟ್ಟಿಯಾಗಿಲ್ಲವೆ?' ಎಂದು ಕೇಳಿದರು. 'ಸರ್, ಅವರನ್ನು ಭೆಟ್ಟಿಯಾಗುವ ಆಸೆ ಬಹಳ ಇದೆ. ಆದರೆ ಅಂತಹ ಸಂದರ್ಭವೇ ಬರಲಿಲ್ಲ' ಎಂದರು. ತಕ್ಷಣ ಅವರು, 'ಇದ್ಯಾವ ದೊಡ್ಡ ವಿಷಯ? ಈಗಲೇ ಭೆಟ್ಟಿಯಾಗಿ, ನಿಮ್ಮ ಎದುರಿಗೇ